# ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, ಮೊದಲನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562110
ದೂ. : 080-29566001, 080-27682035 ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.tpa.gov.in

## "ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪತ್ರ"

**ವಿಷಯ:** ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಸಿಂಗ್ರಹಳ್ಳಿ ಗ್ರಾಮದ ಸರ್ವೆ ನಂ. 77 ರಲ್ಲಿ 3ಎ-35ಗು, 87 ರಲ್ಲಿ 4ಎ-39ಗು, 91 ರಲ್ಲಿ 4ಎ-32ಗು, 92/2 ರಲ್ಲಿ 2ಎ-00ಗು, 116 ರಲ್ಲಿ 2ಎ-00ಗು, 117 ರಲ್ಲಿ 4ಎ-00ಗು, 141 ರಲ್ಲಿ 4ಎ-00ಗು ಮತ್ತು 143 ರಲ್ಲಿ 7ಎ-26ಗು ಒಟ್ಟು 33ಎ-12ಗು ಅಥವಾ 134758.44 ಚ.ಮೀ ವಿಸ್ತೀರ್ಣ ಪ್ರದೇಶದಲ್ಲಿ ವಸತಿ ವಿನ್ಯಾಸ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 17 (2ಎ) ರ ಅಡಿಯಲ್ಲಿ ತಾತ್ಕಾಲಿಕ ಅನುಮೋದನೆ ನೀಡಲು ಕೋರಿರುವ ಬಗ್ಗೆ.

**ಉಲ್ಲೇಖ:**

1) ಮೆ॥ ಪಿನಾಕಲ್ ಇನ್‌ವೆಸ್ಟ್‌ಮೆಂಟ್ಸ್ ರ ಪರವಾಗಿ ಅಧಿಕೃತ ಸಹಿದಾರರಾದ ಶ್ರೀ ಬಿ.ವಿ.ಬಾಲಾಜಿ ಬಿನ್ ವೆಂಕಟೇಶ್, ಶ್ರೀ ಜೆ.ಜಗದೀಶ್ ಬಿನ್ ಲೇ॥ ದೊಡ್ಡಜಯಣ್ಣ ಮತ್ತು ಶ್ರೀ ಸತೀಶ್ ಹೆಗ್ಡೆ ಬಿನ್ ರಾಘವ ಹೆಗ್ಡೆ ರವರುಗಳ ಅರ್ಜಿ ಸಂಖ್ಯೆ : 4355, ದಿನಾಂಕ: 09/03/2023.
2) ಸರ್ಕಾರದ ಆದೇಶ ಸಂ. ನಅಇ 56 ಬಿಎಂಆರ್ 2013, ಬೆಂಗಳೂರು ದಿನಾಂಕ: 18/03/2013 (ಸ.ನಂ 77, 92, 116, 117, 141 & 143) & ನಅಇ 126 ಬಿಎಂಆರ್ 2022, ಬೆಂಗಳೂರು ದಿನಾಂಕ: 15/07/2022 (ಸ.ನಂ 87 & 91).
3) ಈ ಪ್ರಾಧಿಕಾರದ ಭೂಉಪಯೋಗ ಬದಲಾವಣೆ ಆದೇಶದ ಸಂಖ್ಯೆ: ಬಿಐಎಎಪಿಎ/ಟಿಪಿ/ಭೂಉಬ/324/2012-13/1238 ದಿನಾಂಕ: 10/07/2013 & ಬಿಐಎಎಪಿಎ/ಟಿಪಿ/ಭೂಉಬ/105/2013-14/1285 ದಿನಾಂಕ: 17/09/2022.
4) ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಅಧಿಕೃತ ಜ್ಞಾಪನ ಅರ್ಜಿ ಸಂಖ್ಯೆ: ನಂ. 410822, ದಿನಾಂಕ: 31/12/2022 (ಸ.ನಂ. 77), ನಂ. 410833, ದಿನಾಂಕ: 31/12/2022 (ಸ.ನಂ. 87), ನಂ. 410830, ದಿನಾಂಕ: 31/12/2022 (ಸ.ನಂ. 91), ನಂ. 428291, ದಿನಾಂಕ: 18/01/2023 (ಸ.ನಂ. 92/2), ನಂ. 410827, ದಿನಾಂಕ: 31/12/2022 (ಸ.ನಂ. 116), ನಂ. 410825, ದಿನಾಂಕ: 31/12/2022 (ಸ.ನಂ. 117), ಎಎಲ್ಎನ್(ದೇ.ಕು)ಎಸ್ಆರ್/99/2013-14, ದಿನಾಂಕ: 14/07/2015 (ನಂ.743731, ದಿ: 05/04/2025) (ಸ.ನಂ. 141) ಮತ್ತು ನಂ. 410826, ದಿನಾಂಕ: 31/12/2022 (ಸ.ನಂ. 143).
5) ದಿನಾಂಕ: 13/03/2023 ರಂದು ನಡೆದ ಪ್ರಾಧಿಕಾರದ 137 ನೇ ಸಭೆಯ ವಿಷಯ ಸಂಖ್ಯೆ: 137.48 ರ ನಡಾವಳಿ.
6) ಈ ಪ್ರಾಧಿಕಾರದ ಸಮಸಂಖ್ಯೆ ಶುಲ್ಕಪಾವತಿ ಸೂಚನಾ ಪತ್ರ ದಿನಾಂಕ: 20/05/2023
7) ಶ್ರೀಮತಿ ವಿನೋದ ಬಿನ್ ಲೇ॥ ರಾಮಯ್ಯ ಕೋಂ ಕೋದಂಡರಾಮಯ್ಯ ರವರ ದೂರು ಅರ್ಜಿ ದಿನಾಂಕ: 30/05/2023.
8) ಅರ್ಜಿದಾರರು ಶುಲ್ಕಗಳನ್ನು ಪಾವತಿಸಿದ ರಶೀದಿ ಸಂಖ್ಯೆ: 0012395, ದಿನಾಂಕ: 17/06/2023 ರಂತೆ ಒಟ್ಟು ರೂ. 93,42,910/- (ತೊಂಭತ್ಮೂರು ಲಕ್ಷದ ನಲವತ್ತೆರಡು ಸಾವಿರದ ಒಂಭೈನೂರ ಹತ್ತು ರೂಪಾಯಿಗಳು ಮಾತ್ರ) ರಂತೆ ಶುಲ್ಕಗಳನ್ನು ಪಾವತಿಸಿರುತ್ತಾರೆ.
9) ಈ ಪ್ರಾಧಿಕಾರದ ಸಮಸಂಖ್ಯೆ ತಿಳುವಳಿಕೆ ಪತ್ರ ದಿನಾಂಕ: 19/06/2023.
10) ಅರ್ಜಿದಾರರುಗಳ ಮನವಿ ಪತ್ರ ದಿನಾಂಕ: 10/07/2023.
11) ಶ್ರೀ ಮಹೇಶ್ ಇವರು ಸಲ್ಲಿಸಿರುವ ದೂರು ಅರ್ಜಿ ದಿನಾಂಕ: 18/07/2023.
12) ಈ ಪ್ರಾಧಿಕಾರದ ಸಮಸಂಖ್ಯೆ ಪತ್ರ ದಿನಾಂಕ: 20/07/2023.
13) ಅರ್ಜಿದಾರರ ಮನವಿ ಪತ್ರ ದಿನಾಂಕ: 17/08/2024.

14) ಈ ಪ್ರಾಧಿಕಾರದ ಸಮಸಂಖ್ಯೆ ಪತ್ರ ದಿನಾಂಕ: 02/09/2024.
15) ಶ್ರೀ ಎಸ್.ಎಂ ಆನಂದ್‌ಕುಮಾರ್ ಬಿನ್ ಲೇ॥ ಮುನಿಆವಲಪ್ಪ ರವರ ಮನವಿ ದಿನಾಂಕ: 24/09/2024.
16) ಭೂದಾಖಲೆಗಳ ಸಹಾಯಕ ನಿರ್ದೇಶಕರು, ಭೂದಾಖಲೆಗಳ ಇಲಾಖೆ ರವರ ಕಛೇರಿ ಪತ್ರ ಸಂಖ್ಯೆ: ಭೂಸನಿ/ಟಿಎನ್ಎಲ್/ 36/2025-26, ದಿನಾಂಕ: 08/04/2025
17) ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 24 ಶಾಸನ 2015, ಬೆಂಗಳೂರು ದಿನಾಂಕ: 10/09/2015 ಮತ್ತು ಡಿಪಿಎಎಲ್36ಶಾಸನ 2021, ಬೆಂಗಳೂರು ದಿನಾಂಕ:07/10/2021.

* * * * * * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮೆ॥ ಪಿನಾಕಲ್ ಇನ್‌ವೆಸ್ಟ್‌ಮೆಂಟ್ಸ್ ರ ಪರವಾಗಿ ಅಧಿಕೃತ ಸಹಿದಾರರಾದ ಶ್ರೀ ಬಿ.ವಿ.ಬಾಲಾಜಿ ಬಿನ್ ವೆಂಕಟೇಶ್, ಶ್ರೀ ಜೆ.ಜಗದೀಶ್ ಬಿನ್ ಲೇ॥ ದೊಡ್ಡಜಯಣ್ಣ ಮತ್ತು ಶ್ರೀ ಸತೀಶ್ ಹೆಗ್ಡೆ ಬಿನ್ ರಾಘವ ಹೆಗ್ಡೆ ರವರುಗಳು ಉಲ್ಲೇಖ (1) ರ ಅರ್ಜಿಯಲ್ಲಿ ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಸಿಂಗ್ರಹಳ್ಳಿ ಗ್ರಾಮದ ಸರ್ವೆ ನಂ. 77 ರಲ್ಲಿ 3ಎ-35ಗು, 87 ರಲ್ಲಿ 4ಎ-39ಗು, 91 ರಲ್ಲಿ 4ಎ-32ಗು, 92/2 ರಲ್ಲಿ 2ಎ-00ಗು, 116 ರಲ್ಲಿ 2ಎ-00ಗು, 117 ರಲ್ಲಿ 4ಎ-00ಗು, 141 ರಲ್ಲಿ 4ಎ-00ಗು ಮತ್ತು 143 ರಲ್ಲಿ 7ಎ-26ಗು ಒಟ್ಟು 33ಎ-12ಗು ಅಥವಾ 134758.44 ಚ.ಮೀ ವಿಸ್ತೀರ್ಣ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 17 (2ಎ)ರ ಅಡಿಯಲ್ಲಿ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡಲು ಕೋರಲಾಗಿದೆ.

ಪ್ರಶ್ನಿತ ಜಮೀನುಗಳು ಸರ್ಕಾರದಿಂದ ಅನುಮೋದನೆಯಾಗಿರುವ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ - 2021 ರಲ್ಲಿ ವ್ಯವಸಾಯ ಭೂಉಪಯೋಗ ವಲಯದಲ್ಲಿದ್ದು, ಉಲ್ಲೇಖ (2) ರ ಸರ್ಕಾರದ ಆದೇಶದಂತೆ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರಡಿಯಲ್ಲಿ ಪ್ರಸ್ತಾಪಿತ ಜಮೀನುಗಳು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಯಾಗಿರುತ್ತದೆ. ಅದರಂತೆ ಉಲ್ಲೇಖ (3) ರಲ್ಲಿ ಈ ಪ್ರಾಧಿಕಾರದಿಂದ ಭೂಉಪಯೋಗ ಬದಲಾವಣೆಗೆ ಸಂಬಂಧಿಸಿದಂತೆ ಆದೇಶ ಪತ್ರ ನೀಡಲಾಗಿರುತ್ತದೆ. ಉಲ್ಲೇಖ (4) ರ ಅಧಿಕೃತ ಜ್ಞಾಪನ ಪತ್ರಗಳಂತೆ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರಿಂದ ವಸತಿ ಉದ್ದೇಶಕ್ಕಾಗಿ ಭೂಪರಿವರ್ತನೆಯಾಗಿರುತ್ತದೆ.

ಸರ್ಕಾರದ ಅದಿಸೂಚನೆ ಸಂಖ್ಯೆ: ಸಂವ್ಯಶಾಇ24 ಶಾಸನ2015, ದಿನಾಂಕ: 10/09/2015 ರನ್ವಯ ಕಾಯ್ದೆಗೆ ತಿದ್ದುಪಡಿಯಾಗಿರುವಂತೆ ಕೆಟಿಸಿಪಿ ಕಾಯ್ದೆ 1961 ರ ಪ್ರಕರಣ 17(2)(ಎ) ರಂತೆ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡುವ ಸಂಬಂಧ ಉಲ್ಲೇಖ (5) ರ ದಿನಾಂಕ: 13/03/2023 ರಂದು ನಡೆದ ಪ್ರಾಧಿಕಾರದ 137 ನೇ ಸಭೆಯ ವಿಷಯ ಸಂಖ್ಯೆ: 137.48 ರ ನಡಾವಳಿಯಲ್ಲಿ ಸ.ನಂ 141 & 143 ರ ಜಮೀನುಗಳಲ್ಲಿ ಬಂಡಿದಾರಿ ಪಂಕ್ತೀಕರಣದ ಬಗ್ಗೆ ಭೂದಾಖಲೆಗಳ ಸಹಾಯಕ ನಿರ್ದೇಶಕರು, ದೇವನಹಳ್ಳಿ ತಾಲ್ಲೂಕು ರವರಿಂದ ಸ್ಪಷ್ಟೀಕರಣ ಪಡೆದುಕೊಂಡು, ಅದರಂತೆ ವಲಯ ನಿಯಮಾವಳಿಗನುಗುಣವಾಗಿ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಯನ್ನು ಪಡೆದುಕೊಂಡು, ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಸಿಂಗ್ರಹಳ್ಳಿ ಗ್ರಾಮದ ಸರ್ವೆ ನಂ. 77 ರಲ್ಲಿ 3ಎ-35ಗು, 87 ರಲ್ಲಿ 4ಎ-39ಗು, 91 ರಲ್ಲಿ 4ಎ-32ಗು, 92/2 ರಲ್ಲಿ 2ಎ-00ಗು, 116 ರಲ್ಲಿ 2ಎ-00ಗು, 117 ರಲ್ಲಿ 4ಎ-00ಗು, 141 ರಲ್ಲಿ 4ಎ-00ಗು ಮತ್ತು 143 ರಲ್ಲಿ 7ಎ-26ಗು ಒಟ್ಟು 33ಎ-12ಗು ಅಥವಾ 134758.44 ಚ.ಮೀ ವಿಸ್ತೀರ್ಣದ ಪ್ರದೇಶದಲ್ಲಿ ವಸತಿ ವಿನ್ಯಾಸ ನಕ್ಷೆಗೆ ಪ್ರಾಧಿಕಾರದ ಸಾಮಾನ್ಯ ಷರತ್ತುಗಳಿಗೆ ಒಳಪಡಿಸಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 17 (2ಎ) ರ ಅಡಿಯಲ್ಲಿ ತಾತ್ಕಾಲಿಕ ಅನುಮೋದನೆ ನೀಡಲು ತೀರ್ಮಾನಿಸಲಾಗಿರುತ್ತದೆ.

ಪ್ರಾಧಿಕಾರದ ಸಭೆಯ ನಡಾವಳಿಯ ರೀತ್ಯ ಉಲ್ಲೇಖ (6) ರ ಈ ಕಛೇರಿಯ ಶುಲ್ಕ ಪಾವತಿ ಸೂಚನಾ ಪತ್ರದಲ್ಲಿ ನಿಗಧಿತ ಶುಲ್ಕಗಳನ್ನು ಪಾವತಿಸಿ, ಅಗತ್ಯ ದಾಖಲೆಗಳನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು.

ಉಲ್ಲೇಖ (7) ರ ಶ್ರೀಮತಿ ವಿನೋದ ಬಿನ್ ಲೇ॥ ರಾಮಯ್ಯ ಕೋಂ ಕೋದಂಡರಾಮಯ್ಯ ರವರ ತಕರಾರು ಅರ್ಜಿಯಲ್ಲಿ ಸದರಿ ಜಮೀನುಗಳಿಗೆ ಸಂಬಂಧಿಸಿದಂತೆ ಮಾನ್ಯ ಹಿರಿಯ ಸಿವಿಲ್ ಜಡ್ಜ್ & ಜೆಎಂಎಫ್‌ಸಿ ನ್ಯಾಯಾಲಯ,

ನಂ. 333/1, ಮೊದಲನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562110
ದೂ. : 080-29566001, 080-27682035 ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.tpa.gov.in

ದೇವನಹಳ್ಳಿ ಇಲ್ಲಿ ಓ.ಎಸ್.ನಂ 365/2020 ರಂತೆ ಪ್ರಕರಣ ದಾಖಲಾಗಿದ್ದು, ಸದರಿ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ತಡೆಯಾಜ್ಞೆ ನೀಡಿರುವುದರಿಂದ ಪ್ರಶ್ನಿತ ಜಮೀನುಗಳಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ವಹಿವಾಟು ಹಾಗೂ ಯಾವುದೇ ವಿಧವಾದ ದಾಖಲೆಗಳ ವಗ್ಗೈರೆ ಮಾಡದಂತೆ ಕೋರಿರುತ್ತಾರೆ.

ಅರ್ಜಿದಾರರು ಉಲ್ಲೇಖ (8) ರಂತೆ ಅರ್ಜಿದಾರರು ನಿಗಧಿತ ಶುಲ್ಕಗಳನ್ನು ಪಾವತಿಸಿರುತ್ತಾರೆ. ಉಲ್ಲೇಖ (9) ರ ಈ ಕಛೇರಿಯ ತಿಳುವಳಿಕೆ ಪತ್ರದಲ್ಲಿ ದೂರುದಾರರಾದ ಶ್ರೀಮತಿ ವಿನೋದ ಬಿನ್ ಲೇ॥ ರಾಮಯ್ಯ ಕೋಂ ಕೋದಂಡರಾಮಯ್ಯ ರವರು ನೀಡಿರುವ ದೂರಿನಲ್ಲಿನ ಅಂಶಗಳ ಬಗ್ಗೆ ವಿವರಣೆ / ಸಮಜಾಯಿಷಿಯನ್ನು ಸಲ್ಲಿಸಲು ಸೂಚಿಸಲಾಗಿರುತ್ತದೆ. ಉಲ್ಲೇಖ (10) ರಂತೆ ಅರ್ಜಿದಾರರು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ, ಸಿಂಗ್ರಹಳ್ಳಿ ಗ್ರಾಮದ ಸ.ನಂ 87 & 91 ರ ಜಮೀನುಗಳಿಗೆ ಸಂಬಂಧಿಸಿದಂತೆ ಶ್ರೀ ಜೆ.ಜಗದೀಶ್ ರವರ ಕುಟುಂಬದಲ್ಲಿ ಸದರಿ ಜಮೀನುಗಳ ವಿಭಾಗದ ಕುರಿತು ಕುಟುಂಬ ಸದಸ್ಯರುಗಳು ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಆದರೆ ಸದರಿ ಜಮೀನುಗಳಿಗೆ ಈಗಾಗಲೇ ನನ್ನ ಹೆಸರಿನಲ್ಲಿ ಆರ್‌ಟಿಸಿ & ಎಂಆರ್ ರಂತೆ ಖಾತೆಯಾಗಿದ್ದು, ಸದರಿ ಜಮೀನುಗಳ ಕುರಿತು ನ್ಯಾಯಾಲಯದಲ್ಲಿ ಬರುವ ಅಂತಿಮ ತೀರ್ಮಾನಕ್ಕೆ ಬದ್ಧನಾಗಿ ಪ್ರಾಧಿಕಾರಕ್ಕೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪಡೆದು ಜಂಟಿಯಾಗಿ ಅಭಿವೃದ್ಧಿಪಡಿಸಲು ಇತರೆ ಮಾಲೀಕರುಗಳೊಂದಿಗೆ ಚರ್ಚಿಸಿ ನಕ್ಷೆ ಅನುಮೋದನೆಗೆ ಅರ್ಜಿ ಸಲ್ಲಿಸಿದ್ದು, ಸದರಿ ದೂರಿನ ಬಗ್ಗೆ ಮಾಲೀಕರ ಒಪ್ಪಿಗೆಯನ್ನು ಸಹ ಪಡೆದು ಸಲ್ಲಿಸುತ್ತಿರುವುದಾಗಿ ತಿಳಿಸಿರುತ್ತಾರೆ.

ಮುಂದುವರೆದು ಉಲ್ಲೇಖ (11) ರಂತೆ ಶ್ರೀ ಮಹೇಶ್ ರವರು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ, ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಸಿಂಗ್ರಹಳ್ಳಿ ಗ್ರಾಮದ ಸರ್ವೆ ನಂ. 87 & 91 ರ ಜಮೀನುಗಳಿಗೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯದಲ್ಲಿ ಸಿವಿಲ್ ವ್ಯಾಜ್ಯವು ವಿಚಾರಣೆ ಹಂತದಲ್ಲಿ ಇರುವಾಗಲೇ ಹಾಗೂ ಯೋಜನಾ ಪ್ರಾಧಿಕಾರದಿಂದ ಯಾವುದೇ ಅನುಮತಿ ಇಲ್ಲದೇ ಅಭಿವೃದ್ಧಿಪಡಿಸುತ್ತಿದ್ದು, ಸದರಿ ಅನಧಿಕೃತ ಅಭಿವೃದ್ಧಿಯನ್ನು ತಡೆಗಟ್ಟಲು ಕೋರಿದ್ದು, ಉಲ್ಲೇಖ (12) ರ ಪ್ರಾಧಿಕಾರದ ಪತ್ರದಲ್ಲಿ ವಸತಿ ಬಡಾವಣೆಯ ಅಭಿವೃದ್ಧಿ ಕಾಮಗಾರಿಗಳನ್ನು ಈ ಕೂಡಲೇ ನಿಲ್ಲಿಸಲು ನಿಯಮಾನುಸಾರ ಸೂಕ್ತ ಕ್ರಮವಹಿಸಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕುಂದಾಣ ಗ್ರಾಮ ಪಂಚಾಯಿತಿ ರವರಿಗೆ ಸೂಚಿಸಲಾಗಿರುತ್ತದೆ.

ಅರ್ಜಿದಾರರು ಉಲ್ಲೇಖ (13) ರಂತೆ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ, ಶ್ರೀಮತಿ ವಿನೋದ ಬಿನ್ ಲೇ॥ ರಾಮಯ್ಯ ಕೋಂ ಕೋದಂಡರಾಮಯ್ಯ ಮತ್ತು ಮಕ್ಕಳು ರವರು ದಿನಾಂಕ: 17/04/2024 ರಂದು ಇನ್ನು ಮುಂದೆ ತಮಗೆ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕುಗಳು ಇರುವುದಿಲ್ಲ ಹಾಗೂ ತಮ್ಮ ಕಡೆಯಿಂದ ಯಾವುದೇ ತರಹದ ತಂಟೆ ತಕರಾರು ಇರುವುದಿಲ್ಲವೆಂದು ಒಪ್ಪಿರುವ ಬಗ್ಗೆ ಮೆ॥ ಪಿನಾಕಲ್ ಇನ್‌ವೆಸ್ಟ್‌ಮೆಂಟ್ ಆದ ನಮ್ಮ ಹೆಸರಿಗೆ ದೃಢೀಕರಣ ಪತ್ರ (Confirmation Deed) ನೋಂದಣಿ ಮಾಡಿಕೊಟ್ಟಿದ್ದು, ಈ ಬಗ್ಗೆ ನೋಂದಾಯಿತ Confirmation Deed ಅನ್ನು ಹಾಗೂ ಅಗತ್ಯ ದಾಖಲೆಗಳೊಂದಿಗೆ ವಲಯನಿಯಮಾವಳಿಗಳ ರೀತ್ಯ ವಸತಿ ವಿನ್ಯಾಸದ ನೀಲಿ ನಕ್ಷೆಯನ್ನು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ನಂತರ, ಉಲ್ಲೇಖ (14) ರ ಈ ಪ್ರಾಧಿಕಾರದ ಪತ್ರದಲ್ಲಿ ಪ್ರಶ್ನಿತ ಜಮೀನುಗಳ ಕಂದಾಯ ದಾಖಲೆಗಳನ್ನು ಪರಿಶೀಲಿಸಿ, ಸ.ನಂ 91, 141 & 143 ರ ಜಮೀನುಗಳಲ್ಲಿ ಗ್ರಾಮ ನಕ್ಷೆಯಂತೆ ಬಂಡಿದಾರಿ ಖರಾಬು ಪ್ರದೇಶವನ್ನು ಅಳತೆಡಿಸಿ ವಸತಿ ವಿನ್ಯಾಸ ನಕ್ಷೆಗೆ ಅನುಮತಿ ನೀಡಬೇಕೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಸ್ಪಷ್ಟೀಕರಣ ಹಾಗೂ ಪ್ರಶ್ನಿತ ಜಮೀನುಗಳ ಪೈಕಿ ಸ.ನಂ 77, 87 & 91 ರ ಜಮೀನುಗಳಲ್ಲಿರುವ 'ಎ' ಖರಾಬು ಪ್ರದೇಶಗಳು ಖರಾಬು ನಿರ್ಧರಣಾ ಸಮಿತಿಯಲ್ಲಿ ತೀರ್ಮಾನವಾಗಿದೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಸ್ಪಷ್ಟೀಕರಣ ಮತ್ತು ಒಂದು ವೇಳೆ ಖರಾಬು ನಿರ್ಧರಣಾ ಸಮಿತಿಯಲ್ಲಿ ತೀರ್ಮಾನವಾಗದೇ ಇದ್ದರೇ ಸದರಿ 'ಎ' ಖರಾಬು ಪ್ರದೇಶಗಳನ್ನು ಅಳತೆಡಿಸಿ ವಸತಿ ವಿನ್ಯಾಸ ನಕ್ಷೆಯನ್ನು ಅನುಮೋದನೆ ನೀಡುವ ಸಂಬಂಧ ದೃಢೀಕೃತ ಸರ್ವೆ ನಕ್ಷೆಯಲ್ಲಿ ಎಲ್ಲಾ ವಿವರಗಳನ್ನು ಸ್ಪಷ್ಟವಾಗಿ ಗುರುತಿಸಿರುವ ಸರ್ವೆ ನಕ್ಷೆಯ ಪ್ರತಿಯನ್ನು ಸಲ್ಲಿಸುವಂತೆ ಭೂದಾಖಲೆಗಳ ಸಹಾಯಕ ನಿರ್ದೇಶಕರು, ಭೂದಾಖಲೆಗಳ ಇಲಾಖೆ ರವರನ್ನು ಕೋರಲಾಗಿತ್ತು.

ಉಲ್ಲೇಖ (15) ರಂತೆ ಶ್ರೀ ಎಸ್.ಎಂ ಆನಂದ್‌ಕುಮಾರ್ ಬಿನ್ ಲೇ॥ ಮುನಿಆವಲಪ್ಪ ರವರು ಮನವಿ ಸಲ್ಲಿಸಿ, ಪ್ರಶ್ನಿತ ಜಮೀನುಗಳ ಪೈಕಿ ಸ.ನಂ 143 ರಲ್ಲಿ 7ಎ–26ಗು ಜಮೀನು ಸರ್ಕಾರಿ ಗೋಮಾಳವಾಗಿದ್ದು, ಪೋಡಿದುರಸ್ಥಿಯಾಗಿರುವ ಬಗ್ಗೆ ಸರ್ವೆ ಇಲಾಖೆಯಲ್ಲಿ ದಾಖಲೆ ಲಭ್ಯವಿರುವುದಿಲ್ಲ. ಹಾಗಾಗಿ ಸದರಿ ಜಮೀನಿನ ಭೂಪರಿವರ್ತನೆ ಆದೇಶದ ಅನುಮತಿಯನ್ನು ರದ್ದುಪಡಿಸಬೇಕಾಗಿ ಕೋರಿರುತ್ತಾರೆ. ಆದರೆ ಉಲ್ಲೇಖ (16) ರ ಭೂದಾಖಲೆಗಳ ಸಹಾಯಕ ನಿರ್ದೇಶಕರು, ಭೂದಾಖಲೆಗಳ ಇಲಾಖೆ ರವರ ಪತ್ರದಲ್ಲಿ ಪ್ರಶ್ನಿತ ಜಮೀನುಗಳು ಹಿಡುವಳಿ ಜಮೀನಾಗಿದ್ದು, ಭೂಪರಿವರ್ತನೆಯಾಗಿರುತ್ತದೆ ಹಾಗೂ ಖರಾಬು ವಿವರಗಳುಳ್ಳ ಜಂಟಿ ನಕ್ಷೆಯನ್ನು ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ. ಸದರಿ ಜಂಟಿ ಸರ್ವೆ ನಕ್ಷೆಯಂತೆ ವಲಯ ನಿಯಮಾವಳಿಗಳಿಗೆ ಅನುಗುಣವಾಗಿ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಯನ್ನು ತಯಾರಿಸಿ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ಹಾಗೂ ಅರ್ಜಿದಾರರು ಪ್ರಶ್ನಿತ ಜಮೀನುಗಳ ಪೈಕಿ ಸ.ನಂ 87 ರಲ್ಲಿ 4ಎ–39ಗು, 91 ರಲ್ಲಿ 4ಎ–32ಗು & 141 ರಲ್ಲಿ 4ಎ–00ಗು ವಿಸ್ತೀರ್ಣದ ಜಮೀನುಗಳನ್ನು ಹಿಂದಿನ ಭೂಮಾಲೀಕರಾದ ಶ್ರೀ ಜೆ.ಜಗದೀಶ್ ಬಿನ್ ಲೇ॥ ದೊಡ್ಡಜಯಣ್ಣ ಹಾಗೂ ಶ್ರೀ ಸತೀಶ್ ಹೆಗ್ಡೆ ಬಿನ್ ರಾಘವ ಹೆಗ್ಡೆ ರವರುಗಳಿಂದ ನೋಂದಾಯಿತ ಶುದ್ಧ ಕ್ರಯಪತ್ರದ ಮೂಲಕ ಮೆ॥ ಪಿನಾಕಲ್ ಇನ್‌ವೆಸ್ಟ್‌ಮೆಂಟ್ ರವರು ಮಾಲೀಕತ್ವ ಪಡೆದುಕೊಂಡಿರುವುದರಿಂದ, ಕ್ರಯ ಪತ್ರದ ಪ್ರತಿಗಳನ್ನು ಸಲ್ಲಿಸುತ್ತಾ, ಸದರಿ ವಸತಿ ವಿನ್ಯಾಸ ನಕ್ಷೆ ಅನುಮೋದನೆಯನ್ನು ಮೆ॥ ಪಿನಾಕಲ್ ಇನ್‌ವೆಸ್ಟ್‌ಮೆಂಟ್ ರವರ ಹೆಸರಿಗೆ ನೀಡುವಂತೆ ಕೋರಿರುತ್ತಾರೆ.

ಮೇಲ್ಕಂಡ ಅಂಶಗಳನ್ವಯ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/157/ಬಿಎಂಆರ್/2005 ದಿನಾಂಕ: 27/01/2009 ಮತ್ತು ತಿದ್ದುಪಡಿ ಆದೇಶ ದಿನಾಂಕ: 29/01/2009 ರಲ್ಲಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಅನುಮೋದನೆಗೊಂಡಿರುವ ಮಹಾಯೋಜನೆಯ ವಲಯ ನಿಯಮಾವಳಿಗಳ ಅನುಸಾರ, ಉಲ್ಲೇಖ (5) ರ ಪ್ರಾಧಿಕಾರದ ಸಭೆಯ ನಡಾವಳಿಯ ರೀತ್ಯ ಹಾಗೂ ಉಲ್ಲೇಖ (17) ರ ಸರ್ಕಾರದ ಅಧಿಸೂಚನೆಗಳನ್ವಯ ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಸಿಂಗ್ರಹಳ್ಳಿ ಗ್ರಾಮದ ಸರ್ವೆ ನಂ. 77 ರಲ್ಲಿ 3ಎ–35ಗು, 87 ರಲ್ಲಿ 4ಎ–39ಗು, 91 ರಲ್ಲಿ 4ಎ–32ಗು, 92/2 ರಲ್ಲಿ 2ಎ–00ಗು, 116 ರಲ್ಲಿ 2ಎ–00ಗು, 117 ರಲ್ಲಿ 4ಎ–00ಗು, 141 ರಲ್ಲಿ 4ಎ–00ಗು ಮತ್ತು 143 ರಲ್ಲಿ 7ಎ–26ಗು ಒಟ್ಟು 33ಎ–12ಗು ಅಥವಾ 134758.44 ಚ.ಮೀ ವಿಸ್ತೀರ್ಣ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 17 (2ಎ) ರನ್ವಯ ವಸತಿ ವಿನ್ಯಾಸ ನಕ್ಷೆಗೆ "ತಾತ್ಕಾಲಿಕ ಅನುಮೋದನೆ" ಈ ಕೆಳಕಂಡಂತೆ ನೀಡಲು ಆದೇಶಿಸಲಾಗಿದೆ.

**ಆದೇಶ ಸಂಖ್ಯೆ: ಬಿಐಎಎಪಿಎ/ಟಿಪಿ/ಎಲ್‌ಎಒ/128/2022–23/25–26,** 1129 **ದಿನಾಂಕ:** 24 APR 2025

## ಆದೇಶ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ರ ಕಲಂ 17(2) (ಎ) ರಡಿಯಲ್ಲಿ ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಸಿಂಗ್ರಹಳ್ಳಿ ಗ್ರಾಮದ ಸರ್ವೆ ನಂ. 77 ರಲ್ಲಿ 3ಎ–35ಗು, 87 ರಲ್ಲಿ 4ಎ–39ಗು, 91 ರಲ್ಲಿ 4ಎ–32ಗು, 92/2 ರಲ್ಲಿ 2ಎ–00ಗು, 116 ರಲ್ಲಿ 2ಎ–00ಗು, 117 ರಲ್ಲಿ 4ಎ–00ಗು, 141 ರಲ್ಲಿ 4ಎ–00ಗು ಮತ್ತು 143 ರಲ್ಲಿ 7ಎ–26ಗು ಒಟ್ಟು 33ಎ–12ಗು ಅಥವಾ 134758.44 ಚ.ಮೀ ವಿಸ್ತೀರ್ಣ ಪ್ರದೇಶವನ್ನು ಮಟ್ಟ ಮಾಡುವುದು, ನೆಲಗಟ್ಟ ಹಾಸುವುದು, ಜಲ್ಲಿಕಲ್ಲನ್ನು ಹಾಸುವುದು, ಕಲ್ಲುಚಪ್ಪಡಿ ಹಾಕುವುದು, ನಾಲೆಗಳ ನಿರ್ಮಾಣ, ಚರಂಡಿಗಳ ನಿರ್ಮಾಣ, ಮೋರಿಗಳ ನಿರ್ಮಾಣ, ಬೀದಿ ದೀಪದ ವ್ಯವಸ್ಥೆ ಮತ್ತು ನೀರು ಸರಬರಾಜಿಗೆ ಮಾಡಬೇಕಾದ ವ್ಯವಸ್ಥೆಗಳನ್ನೊಳಗೊಂಡಂತೆ ನಿವೇಶನಗಳು ರಸ್ತೆ ಪಂಕ್ತೀಕರಣ, ಉದ್ಯಾನವನ ಮತ್ತು ನಾಲಾ ಪ್ರದೇಶ ಮಳೆನೀರು ಸಂಗ್ರಹಣೆ ಘಟಕ (Rain water Harvesting), Sewage Treatment Plant (ಘನತ್ಯಾಜ್ಯ ನೀರು ಸಂಸ್ಕರಣಾ ಘಟಕ) ಮತ್ತು ಯಾವುದೇ ಇತರೆ ಮೂಲ ಸೌಕರ್ಯವನ್ನು ತೋರಿಸಿ ಗಡಿ ನಿರ್ಧಾರ ಮತ್ತು ಅಭಿವೃದ್ಧಿ ಉದ್ದೇಶಗಳಿಗಾಗಿ ಮಾತ್ರ ವಸತಿ ವಿನ್ಯಾಸ ನಕ್ಷೆಗೆ ಈ ಕೆಳಕಂಡ ನಿಬಂಧನೆಗಳಿಗೆ ಒಳಪಡಿಸಿ, "ತಾತ್ಕಾಲಿಕ ಅನುಮೋದನೆ" ನೀಡಲಾಗಿದೆ.

**ನಿಬಂಧನೆಗಳು:–**

1) ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಮಂಜೂರಾತಿಯ ಅವಧಿಯು ಮಂಜೂರಾತಿ ನೀಡಿದ ದಿನದಿಂದ 02 ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ವಸತಿ ವಿನ್ಯಾಸದ ಅಭಿವೃದ್ಧಿ ಕಾರ್ಯ ಪೂರ್ಣಗೊಳಿಸದಿದ್ದಲ್ಲಿ ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸ ನಕ್ಷೆಯ ಅನುಮತಿಯನ್ನು ನವೀಕರಿಸಿಕೊಳ್ಳತಕ್ಕದ್ದು.

2) ಪ್ರಾಧಿಕಾರಕ್ಕೆ ಸಮಾಧಾನವಾಗುವಂತೆ ಮಟ್ಟ ಮಾಡುವುದು, ನೆಲಗಟ್ಟು ಹಾಸುವುದು, ಜಲ್ಲಿಕಲ್ಲನ್ನು ಹಾಸುವುದು, ಕಲ್ಲು ಚಪ್ಪಡಿ ಹಾಕುವುದು, ನಾಲೆಗಳ ನಿರ್ಮಾಣ, ಚರಂಡಿಗಳ ನಿರ್ಮಾಣ, ಮೋರಿಗಳ ನಿರ್ಮಾಣ, ಬೀದಿದೀಪದ ವ್ಯವಸ್ಥೆ ಮತ್ತು ನೀರು ಸರಬರಾಜಿಗೆ ಮಾಡಬೇಕಾದ ವ್ಯವಸ್ಥೆಯನ್ನೊಳಗೊಂಡಂತೆ ನಿವೇಶನಗಳು, ರಸ್ತೆ ಪಂಕ್ತೀಕರಣ, ಉದ್ಯಾನವನ ಮತ್ತು ನಾಗರೀಕ ಸೌಲಭ್ಯ ಪ್ರದೇಶ ಮತ್ತು ಯಾವುದೇ ಇತರ ಮೂಲ ಸೌಕರ್ಯವನ್ನು ತೋರಿಸಿ, ಗಡಿ ನಿರ್ಧಾರ ಮತ್ತು ಅಭಿವೃದ್ಧಿ ಉದ್ದೇಶಗಳಿಗಾಗಿ ನಿಯಮಿಸಬಹುದಾದ ಅಂಥ ನಿಯಮಗಳಿಗೆ ಅನುಸಾರವಾಗಿ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಮಂಜೂರಾತಿಯನ್ನು ನೀಡಲಾಗಿದೆ.

3) ತಾತ್ಕಾಲಿಕ ಅನುಮೋದನೆ ಆಗಿರುವ ವಸತಿ ವಿನ್ಯಾಸ ನಕ್ಷೆಯ ರೀತ್ಯ ಮಾಲೀಕನು ಯಾವುದೇ ಪರಿಹಾರವನ್ನು ಕ್ಲೇಮು ಮಾಡದೆಯೇ ಉಚಿತವಾಗಿ ನೋಂದಾಯಿತ ಪರಿತ್ಯಾಜನಾ ಪತ್ರದ ಮುಖಾಂತರ ಸಾರ್ವಜನಿಕ ಉಪಯೋಗದ ಉದ್ಯಾನವನ ಹಾಗೂ ರಸ್ತೆ ಪ್ರದೇಶಗಳನ್ನು ಸ್ಥಳೀಯ ಸಂಸ್ಥೆಗೆ ಹಾಗೂ ನಾಗರೀಕ ಸೌಲಭ್ಯದ ನಿವೇಶನವನ್ನು ಈ ಪ್ರಾಧಿಕಾರಕ್ಕೆ ಮುಫತ್ತಾಗಿ ಹಸ್ತಾಂತರಿಸತಕ್ಕದ್ದು. ನಾಗರೀಕ ಸೌಲಭ್ಯ ನಿವೇಶನ ಮತ್ತು ಉದ್ಯಾನವನ ಪ್ರದೇಶಗಳಿಗೆ Chain link Fencing ಅಳವಡಿಸಿ ಸಂರಕ್ಷಿಸತಕ್ಕದ್ದು.

4) ಸಂಬಂಧಪಟ್ಟ ಪ್ರಾಧಿಕಾರದ/ಮಂಡಳಿ/ಇಲಾಖೆಯ ಮೇಲ್ವಿಚಾರಣೆಯ ಅಡಿಯಲ್ಲಿ, ಮೇಲೆ ಹೇಳಲಾದ ಎಲ್ಲಾ ಮೂಲ ಸೌಕರ್ಯಗಳನ್ನು ಒಳಗೊಂಡ ಎಲ್ಲಾ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡಿರುವುದನ್ನು ಖಚಿತಪಡಿಸಿಕೊಳ್ಳಲು ಮತ್ತು ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದಕ್ಕಾಗಿ ಸಂಬಂಧಪಟ್ಟ ಪ್ರಾಧಿಕಾರ/ ಮಂಡಳಿ/ ಇಲಾಖೆಯಿಂದ ಕಾರ್ಯಪೂರ್ತಿ ಪ್ರಮಾಣ ಪತ್ರವನ್ನು ಪಡೆದು ಮತ್ತು ಸ್ಥಳೀಯ ಸಂಸ್ಥೆಗೆ ಉದ್ಯಾನವನಗಳನ್ನು ಹಾಗೂ ರಸ್ತೆ ಪ್ರದೇಶಗಳನ್ನು & ನಾಗರೀಕ ಸೌಲಭ್ಯದ ಪ್ರದೇಶವನ್ನು ಈ ಪ್ರಾಧಿಕಾರಕ್ಕೆ ಬಿಟ್ಟುಕೊಟ್ಟ ಬಗ್ಗೆ ದಾಖಲೆಗಳನ್ನು ಸಲ್ಲಿಸತಕ್ಕದ್ದು.

5) ಅನುಮೋದಿತ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯ ರೀತ್ಯ ಅನುಮೋದನೆ ನೀಡಿದ 02 ವರ್ಷಗಳೊಳಗಾಗಿ ಸಂಪೂರ್ಣವಾಗಿ ಉದ್ಯಾನವನ, ನಾಗರೀಕ ಸೌಲಭ್ಯಕ್ಕೆ ಮೀಸಲಿಟ್ಟ ಜಾಗ, ರಸ್ತೆಗಳು, ಒಳಚರಂಡಿ ವ್ಯವಸ್ಥೆ, ನೀರಿನ ಸೌಕರ್ಯ, ಮಳೆನೀರು ಸಂಗ್ರಹ ಘಟಕ (Rain water Harvesting), Sewage Treatment Plant (ಘನತ್ಯಾಜ್ಯ ನೀರು ಸಂಸ್ಕರಣಾ ಘಟಕ)/ಸೋಕ್‌ಪಿಟ್, ವಿದ್ಯುತ್ ಸಂಪರ್ಕಗಳನ್ನು ಅಭಿವೃದ್ಧಿಪಡಿಸತಕ್ಕದ್ದು.

6) ವಸತಿ ವಿನ್ಯಾಸದ ಗಡಿ ನಿರ್ಧಾರ ಮತ್ತು ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ ನಕ್ಷೆಯನ್ನು ಬಿಡುಗಡೆ ಮಾಡಲಾಗಿದ್ದು, ವಸತಿ ವಿನ್ಯಾಸದಲ್ಲಿನ ನಿವೇಶಗಳನ್ನು ಪರಭಾರೆ ಮಾಡುವುದಾಗಲೀ ಮತ್ತು ಖಾತೆ ತೆರೆಯುವುದಾಗಲೀ ಮಾಡತಕ್ಕದ್ದಲ್ಲ. ನಿವೇಶನಗಳಲ್ಲಿ ಬರುವ ಕಟ್ಟಡಗಳ ನಿರ್ಮಾಣ ಮಾಡುವ ಸಂಬಂಧ ಪ್ರಾರಂಭಿಕ ಪ್ರಮಾಣ ಪತ್ರವನ್ನು ಅಥವಾ ಲೈಸೆನ್ಸನ್ನು ಮಂಜೂರು ಮಾಡತಕ್ಕದ್ದಲ್ಲ ಅಥವಾ ನೀಡತಕ್ಕದ್ದಲ್ಲ.

7) ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ–2016 ರ ಕಲಂ (3) ಮತ್ತು (4) ರ ರೀತ್ಯ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (RERA) ದಲ್ಲಿ ವಸತಿ ಯೋಜನೆಯ ಪೂರ್ವಭಾವಿ ನೋಂದಣಿಯನ್ನು ಕಡ್ಡಾಯವಾಗಿ ಮಾಡತಕ್ಕದ್ದು.

8) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಯಿಂದ Water (Prevention and Control of Pollution) Act 1974 ರ ಕಲಂ 25 ರ ರೀತ್ಯ ಸೂಕ್ತ ಪ್ರಮಾಣದ Sewage Treatment Plant (ತ್ಯಾಜ್ಯನೀರು ಸಂಸ್ಕರಣಾ ಘಟಕ) ಸ್ಥಾಪಿಸಲು Consent for Establishment ಪೂರ್ವಾನುಮತಿ ಪಡೆಯದೇ ಪ್ರಶ್ನಿತ ನಿವೇಶನ / ಜಾಗದಲ್ಲಿ ನೆಲ ಅಗಿಯುವಿಕೆ ಒಳಗೊಂಡಂತೆ ಯಾವುದೇ ರೀತಿಯ ಕಟ್ಟಡ ನಿರ್ಮಾಣ ಅಥವಾ ವಸತಿ ವಿನ್ಯಾಸ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳತಕ್ಕದ್ದಲ್ಲ. ಉದ್ದೇಶಿತ ಕಟ್ಟಡ / ನೆಲ ಅಭಿವೃದ್ಧಿ ಕಾಮಗಾರಿಗಳನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ Consent for Establishment ಅನುಮತಿ ಪಡೆಯತಕ್ಕದ್ದು.

9) ಪ್ರಸ್ತಾವಿತ ವಸತಿ ವಿನ್ಯಾಸದಲ್ಲಿನ ನಿವೇಶನದಾರರಿಗೆ ನೀರು ಸರಬರಾಜು, STP/ಸೆಪ್ಟಿಕ್ ಟ್ಯಾಂಕ್ ಮುಂತಾದ ಮೂಲಭೂತ ಸೌಕರ್ಯಗಳನ್ನು ವಸತಿ ವಿನ್ಯಾಸದ ಮಾಲೀಕರು ಒದಗಿಸತಕ್ಕದ್ದು.

10) ಪ್ರಶ್ನಿತ ಜಮೀನುಗಳಲ್ಲಿ ಸರ್ಕಾರಿ ಖರಾಬು ಜಾಗವನ್ನು ಯಥಾವತ್ತಾಗಿ ಕಾಯ್ದಿರಿಸತಕ್ಕದ್ದು ಹಾಗೂ ಈ ಜಾಗವನ್ನು ಒತ್ತುವರಿ ಮಾಡುವುದು ಅಥವಾ ಇತರೆ ಯಾವುದೇ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.

11) ಅರ್ಜಿದಾರರು ಉದ್ದೇಶಿಸಿರುವ ಜಮೀನುಗಳಲ್ಲಿ ಸರ್ಕಾರದ ಅಥವಾ ಅನ್ಯಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದು ಬಂದಲ್ಲಿ ಅಂತಹ ಸಂದರ್ಭದಲ್ಲಿ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ.

12) ಈ ವಸತಿ ವಿನ್ಯಾಸದ ಅನುಮೋದನೆಯನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17 ರಡಿಯಲ್ಲಿ ನೀಡುತ್ತಿರುವುದರಿಂದ ಇದನ್ನು ಜಮೀನುಗಳ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಉಪಯೋಗಿಸತಕ್ಕದ್ದಲ್ಲ.

13) ವಸತಿ ವಿನ್ಯಾಸ ನಕ್ಷೆಯಲ್ಲಿನ ನಿವೇಶನಗಳನ್ನು ಯಾವುದೇ ಉಪವಿಭಜನೆ ಮಾಡಿ ಮಾರಾಟ ಮಾಡತಕ್ಕದ್ದಲ್ಲ, ಒಂದು ವೇಳೆ ಯಾವುದೇ ಬದಲಾವಣೆಯ ಅವಶ್ಯಕತೆ ಇದ್ದಲ್ಲಿ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯತಕ್ಕದ್ದು. ಈ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಯಾವುದೇ ಬದಲಾವಣೆಯನ್ನು ಮಾಡಬಾರದು.

14) ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರವು ಮುಂದೆ ಸೂಚಿಸಬಹುದಾದ ಎಲ್ಲಾ ತಾಂತ್ರಿಕ ವಿಷಯಗಳಿಗೆ ಹಾಗೂ ಶುಲ್ಕಗಳನ್ನು ತುಂಬುವುದರ ನಿರ್ಣಯಕ್ಕೆ ಅರ್ಜಿದಾರರು ಬದ್ಧರಾಗಿರುವುದು.

15) ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದಲ್ಲಿನ ರಸ್ತೆ, ರಸ್ತೆಬದಿ ಚರಂಡಿ, ಕಲ್‌ವರ್ಟ್‌ಗಳು, ಪಾದಚಾರಿ ಮಾರ್ಗ ಇತ್ಯಾದಿ ಸಿವಿಲ್ ಕಾಮಗಾರಿಗಳನ್ನು ಸಂಬಂಧಿತ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ/ನಗರ ಸ್ಥಳೀಯ ಸಂಸ್ಥೆಯ ಉಸ್ತುವಾರಿಯಲ್ಲಿ ಕಾರ್ಯಗತಗೊಳಿಸಿ, ಧೃಡೀಕರಣ ಪತ್ರ ಸಲ್ಲಿಸತಕ್ಕದ್ದು.

16) ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದಲ್ಲಿನ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಕಾಮಗಾರಿಗಳನ್ನು ಸಂಬಂಧಿತ ಗ್ರಾಮೀಣ ನೀರು ಸರಬರಾಜು ಇಲಾಖೆ ಉಸ್ತುವಾರಿಯಲ್ಲಿ ಕಾರ್ಯಗತಗೊಳಿಸಿ ಧೃಡೀಕರಣ ಪತ್ರ ಸಲ್ಲಿಸತಕ್ಕದ್ದು.

17) ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದಲ್ಲಿನ ವಿದ್ಯುದ್ಧಿಕರಣ ಕಾಮಗಾರಿಗಳನ್ನು ಸಂಬಂಧಿತ ಬೆಸ್ಕಾಂ ಮಂಡಳಿ ಉಸ್ತುವಾರಿಯಲ್ಲಿ ಕಾರ್ಯಗತಗೊಳಿಸಿ ಧೃಡೀಕರಣ ಪತ್ರ ಸಲ್ಲಿಸತಕ್ಕದ್ದು.

18) ಪ್ರಸ್ತಾಪಿತ ವಸತಿ ವಿನ್ಯಾಸದಲ್ಲಿ ಘನ ತ್ಯಾಜ್ಯಗಳನ್ನು ಹಸಿತ್ಯಾಜ್ಯ, ಒಣತ್ಯಾಜ್ಯ, ಪ್ಲಾಸ್ಟಿಕ್ ಮತ್ತು ಇತ್ಯಾದಿ ವಿಂಗಡಿಸಿ Compost ಮಾಡಲು ಸೂಕ್ತ ಸ್ಥಳವನ್ನು ಕಾಯ್ದಿರಿಸತಕ್ಕದ್ದು.

19) ಅಭಿವೃದ್ಧಿದಾರರು ಕೊಳಚೆ ನೀರನ್ನು ಬಯಲು ಜಾಗ/ಖಾಲಿ ಜಾಗಗಳಿಗೆ ಬಿಡದೇ ಸಂಸ್ಕರಿಸಿ ಕುಡಿಯುವ ನೀರಿನ ಹೊರತಾಗಿ ಅನ್ಯ ಉದ್ದೇಶಗಳಿಗೆ ಬಳಕೆ ಮಾಡತಕ್ಕದ್ದು.

20) ಅಭಿವೃದ್ಧಿದಾರರು ಉದ್ಯಾನವನಕ್ಕಾಗಿ ಕಾಯ್ದಿರಿಸಿರುವ ಪ್ರದೇಶದಲ್ಲಿ ವಿವಿಧ ಜಾತಿಯ ಗಿಡಮರಗಳನ್ನು ಬೆಳಸಿ ಅಭಿವೃದ್ಧಿಪಡಿಸುವುದು ಹಾಗೂ ಉದ್ಯಾನವನ ಉದ್ದೇಶಕ್ಕಾಗಿ ಕಾಯ್ದಿರಿಸಿ ಉಪಯೋಗಿಸತಕ್ಕದ್ದು ಬೇರೆ ಯಾವುದೇ ಉದ್ದೇಶಗಳಿಗೆ ಬದಲಾಯಿಸಬಾರದು. ಈ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಎರಡು ಬದಿಯಲ್ಲಿ ಹೊಸ ಗಿಡ / ಮರಗಳನ್ನು ನೆಟ್ಟು, ಬೆಳೆಸುವುದು.

21) ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದಲ್ಲಿನ ಪ್ರದೇಶದಲ್ಲಿ ಮಳೆ ನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ವಸತಿ ವಿನ್ಯಾಸದಲ್ಲಿ ಅಂತರ್ಜಲ ವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

22) ವಸತಿ ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕ-ಪಕ್ಕದ ಜಮೀನುಗಳಿಗೆ ಸಂಪರ್ಕವನ್ನು ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ.

23) ಉದ್ದೇಶಿತ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಈ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.

24) ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ವಸತಿ ವಿನ್ಯಾಸ ನಕ್ಷೆಗೆ ನೀಡಿರುವ ತಾತ್ಕಾಲಿಕ ಅನುಮೋದನೆ ತಂತಾನೇ ಸ್ವಯಂಚಾಲಿತವಾಗಿ ರದ್ದಾಗುತ್ತದೆ.

25) ಮೇಲಿನಂತೆ ನೀಡಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಲ್ಲಿ ನಿಯಮಾನುಸಾರ ಸೂಕ್ತ ಕ್ರಮ ಜರುಗಿಸಲಾಗುವುದು.

26) ನೈಸರ್ಗಿಕವಾಗಿ ಹರಿಯುವ ನದಿ/ಹಳ್ಳ/ಕೆರೆ/ನಾಲಾ ಮುಂತಾದವುಗಳಿಗೆ ವಿನ್ಯಾಸದ ಮಲೀನ ನೀರನ್ನು ಬಿಡಬಾರದು. ಸರ್ಕಾರದ ಅಧಿಸೂಚನೆ ಸಂ. ಯುಡಿಡಿ15ಟಿಟಿಪಿ2015, ದಿನಾಂಕ: 21/04/2020 ರ ರೀತ್ಯ ಜಲಪ್ರದೇಶಗಳ ಬಫರ್ ಜಾಗದಲ್ಲಿ water pumping stations, Walking tracks, Play fields without any building constructions, cycling trucks & Parks ಗಳನ್ನು ಮಾತ್ರ ಅಭಿವೃದ್ಧಿಪಡಿಸತಕ್ಕದ್ದು.

27) ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 209 ಬಿಎಂಆರ್ 2016, ದಿನಾಂಕ: 31/03/2017 ರ ರೀತ್ಯ ಪತ್ರಿಕೆ, ಮಾಧ್ಯಮ, ಜಾಹಿರಾತು ಪ್ರಕಟಣೆಗಳಲ್ಲಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಹೆಸರನ್ನು ದುರ್ಬಳಕೆ ಮಾಡಿಕೊಳ್ಳುವಂತಿಲ್ಲ. ತಪ್ಪು ಮಾಹಿತಿ ಪ್ರಕಟಿಸದೇ ಅನುಮೋದನೆ ಮಾಡಿಕೊಂಡಿರುವ ಯೋಜನಾ ಪ್ರಾಧಿಕಾರದ ಹೆಸರನ್ನು ಮಾತ್ರ ನಮೂದಿಸತಕ್ಕದ್ದು.

28) ಮೇಲ್ಕಂಡ ಯಾವುದೇ ಷರತ್ತುಗಳನ್ನು ಹಾಗೂ ಇತರೆ ಯಾವುದೇ ಪ್ರಾಧಿಕಾರವು ವಿಧಿಸಿರುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಮಂಜೂರಾತಿಯು ಕೂಡಲೇ ರದ್ದಾಗುವುದು.

ಅರ್ಜಿದಾರರು ವಸತಿ ವಿನ್ಯಾಸದಲ್ಲಿನ ಕಾಮಗಾರಿಗಳನ್ನು ಒಟ್ಟಾರೆಯಾಗಿ ಅಭಿವೃದ್ಧಿಪಡಿಸಿದ ನಂತರ, ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ಪಡೆಯುವ ಪೂರ್ವದಲ್ಲಿ ವಸತಿ ವಿನ್ಯಾಸದಲ್ಲಿನ ನಾಗರೀಕ ಸೌಲಭ್ಯ ನಿವೇಶನವನ್ನು ಈ ಪ್ರಾಧಿಕಾರಕ್ಕೆ ಹಾಗೂ ಉದ್ಯಾನವನ & ರಸ್ತೆಗಳನ್ನು ಸಂಬಂಧಿಸಿದ ಸ್ಥಳೀಯ ಸಂಸ್ಥೆಗೆ ನೋಂದಾಯಿತ ಪರಿತ್ಯಾಜನಾ ಪತ್ರಗಳ ಮುಖಾಂತರ ಪುಕ್ಕಟೆಯಾಗಿ ಹಸ್ತಾಂತರಿಸಿ, ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ವಿವಿಧ ಇಲಾಖೆಗಳಿಂದ ಅಂದರೆ ನೀರು ಸರಬರಾಜು, ಒಳಚರಂಡಿ ಅಭಿವೃದ್ಧಿಪಡಿಸಿರುವ ಬಗ್ಗೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಿಂದ, ರಸ್ತೆ ಕಾಮಗಾರಿಗಳು, ಮಳೆನೀರು ಚರಂಡಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಿಂದ, ವಿದ್ಯುತ್ ಸರಬರಾಜು ಮಾಡಿರುವ ಬಗ್ಗೆ ಬೆಸ್ಕಾಂನಿಂದ, ಉದ್ಯಾನವನ/ ಬಯಲುಜಾಗ ಅಭಿವೃದ್ಧಿಪಡಿಸಿರುವ ಬಗ್ಗೆ ತೋಟಗಾರಿಕೆ ಇಲಾಖೆಯಿಂದ, ಹಾಗೂ Sewage Treatment Plant (ತ್ಯಾಜ್ಯನೀರು ಸಂಸ್ಕರಣಾ ಘಟಕ) ಸ್ಥಾಪಿಸಿರುವ ಬಗ್ಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಯಿಂದ ಪಡೆದ Consent for operation ಪತ್ರ ಮತ್ತು ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಸ್ಥಳೀಯ ಸಂಸ್ಥೆಯಿಂದ ಪ್ರಮಾಣ ಪತ್ರ ಹಾಗೂ ತಾತ್ಕಾಲಿಕ ವಸತಿ ವಿನ್ಯಾಸದಲ್ಲಿ ಮೂಲಭೂತ ಸೌಲಭ್ಯಗಳು ಮತ್ತು ಸಾರ್ವಜನಿಕ ಪ್ರದೇಶಗಳ ನಿರ್ವಹಣೆ ಬಗ್ಗೆ ಸ್ಥಳೀಯ ಸಂಸ್ಥೆಯಿಂದ ಕಾಮಗಾರಿ ಮುಕ್ತಾಯ ಪತ್ರವನ್ನು ಪಡೆದು ಸಲ್ಲಿಸಿ, ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ಹಾಗೂ ನಿವೇಶನಗಳ ಬಿಡುಗಡೆಗೆ ಮನವಿ ಸಲ್ಲಿಸತಕ್ಕದ್ದು.

24/04/2025

ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ಬೆಂಗಳೂರು ಅಂತರಾಷ್ಟ್ರೀಯ ವಿಮಾನ
ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ,
ದೇವನಹಳ್ಳಿ.

ಲಗತ್ತು:-
ಗಡಿ ನಿರ್ಧಾರ ಮತ್ತು ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಮಾತ್ರ ನೀಡಲಾಗಿರುವ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ.

ರವರಿಗೆ,
ಮೆ॥ ಪಿನಾಕಲ್ ಇನ್‌ವೆಸ್ಟ್‌ಮೆಂಟ್ಸ್ ರ ಪರವಾಗಿ ಅಧಿಕೃತ ಸಹಿದಾರರಾದ ಶ್ರೀ ಬಿ.ವಿ.ಬಾಲಾಜಿ ಬಿನ್ ವೆಂಕಟೇಶ್,
#19, ಪ್ರೆಸ್ಟೀಜ್ ಫಾಲ್ಕನ್ ಟವರ್ಸ್, ಬ್ರಂಟನ್ ರಸ್ತೆ,
ಬೆಂಗಳೂರು-560025.